## ಇಲ್ಲಿಯವರೆಗೆ...



ತಾಯಿಯೇ ಮೊದಲ ಗುರು ಎನ್ನುವ ಮಾತು ಭಾವೇಶ್ ಪಾಲಿಗೆ ಅಕ್ಷರಶಃ ಸತ್ಯ. ಕಣ್ಣು ಕಾಣದ ಬಾಲಕನಿಗೆ ಶಾಲೆಯಲ್ಲಿ ಕಹಿ ಅನುಭವಗಳಾದಾಗ, ಅಮ್ಮ ಮಗನ ಬೆನ್ನಿಗೆ ನಿಲ್ಲುತ್ತಾಳೆ. 'ನಾಳೆಯಿಂದ ಶಾಲೆಗೆ ಹೋಗುವುದೇ ಇಲ್ಲ' ಎಂದು ಮಗ ಹೇಳಿದಾಗ, 'ನಿನ್ನ ಅಂಧತ್ವವನ್ನು ಬದಲಾಯಿಸಲಾಗದು. ಒಪ್ಪಿಕೊಂಡು ಸ್ವೀಕರಿಸು' ಎಂದು ಅಮ್ಮ ತಿಳಿಹೇಳುತ್ತಾಳೆ. ಅಮ್ಮನ ಮಾತನ್ನು ಅರ್ಥ ಮಾಡಿಕೊಂಡ ಭಾವೇಶ್ ತನ್ನ ದೈಹಿಕ ಕೊರತೆಯನ್ನು ಸವಾಲಾಗಿ ಸ್ವೀಕರಿಸುತ್ತಾನೆ. ಈ ನಡುವೆ ಭಾವೇಶ್ ತನ್ನ ಅಣ್ಣ ಜತಿನ್‌ನನ್ನು ಕಳೆದುಕೊಳ್ಳುತ್ತಾನೆ. ಬದುಕಿನ ಸುಖದುಃಖಗಳನ್ನು ಎಳೆಯ ವಯಸ್ಸಿನಲ್ಲೇ ಅನುಭವಿಸುವ ಭಾವೇಶ್ ಮಾನಸಿಕವಾಗಿ ಗಟ್ಟಿಯಾಗುತ್ತಾ ಬೆಳೆಯುತ್ತಾನೆ.

ತರಗತಿಯಲ್ಲಿ ಇದ್ದಾಗ ಮೊದಲ ಬಾರಿಗೆ ಭಾವೇಶ್ ಕಬ್ಬಿಣದ ಗುಂಡಾದ ಶಾಟ್‌ಪುಟ್ ಅನ್ನು ಸ್ಪರ್ಶಿಸಿದನು. ಆ ದಿನಗಳಲ್ಲಿ ಅದು ಐದು ಕೆ.ಜಿ. ಭಾರದ್ದಾಗಿತ್ತು. ಈತ ಶಕ್ತಿಯೆಲ್ಲ ಬಿಟ್ಟು ಎಸೆದಾಗ, ಸ್ನೇಹಿತರಿಗಿಂತಲೂ ಅದು ಅರ್ಧ ಮೀಟರ್ ಆದರೂ ದೂರಕ್ಕೆ ಬಿದ್ದದ್ದು ತಿಳಿದು ಖುಷಿಯಾಗುವುದು. ಇವರ ಕ್ರೀಡಾ ಶಿಕ್ಷಕರು, ಭಾವೇಶ್‌ಗೆ ಶಾಟ್‌ಪುಟ್ ಅಲ್ಲದೆ ಡಿಸ್ಕಸ್ ಮತ್ತು ಜ್ಯಾವೆಲಿನ್ ಎಸೆಯುವ ಕಲೆಯನ್ನೂ ಹೇಳಿಕೊಟ್ಟರು. ಅನೇಕ ಅಂತರಶಾಲಾ ಮಟ್ಟದ ಆಟಗಳಲ್ಲಿ ಭಾವೇಶ್‌ಗೆ ಬಹುಮಾನ ಬಂದಿತು. ಅದೇ ದಿನಗಳಲ್ಲಿ ಅವರ ಇತಿಹಾಸದ ಶಿಕ್ಷಕರು ಸಂಗೀತದ ತರಗತಿಗಳನ್ನು ನಡೆಸುತ್ತಿದ್ದರು. ಭಾವೇಶ್ ಗಿಟಾರ್ ಕಲಿಯಲು ಅಲ್ಲಿ ಹೋದರು. ಗಿಟಾರ್ ಪಾಶ್ಚಾತ್ಯ ವಾದನ ಎಂಬ ಅಭಿಪ್ರಾಯ ಇದ್ದರೂ ಭಾವೇಶ್ ಅದರಲ್ಲಿ ಯಮನ್ ರಾಗ ನುಡಿಸುವುದನ್ನು ಕಲಿತಿದ್ದರು. ದಿನೇಶ್ ತಬಲಾದಲ್ಲಿಯೂ, ಶಿಕ್ಷಕರು ಹಾರ್ಮೋನಿಯಂ ಮೇಲೆಯೂ ಭಾವೇಶ್‌ಗೆ ಜೊತೆ ನೀಡುತ್ತಿದ್ದರು.

ಭಾವೇಶ್‌ಗೆ ಪರೀಕ್ಷೆಯಲ್ಲಿ ಬರೆಯಲು ರೈಟರ್ ಒಬ್ಬರನ್ನು ಕೊಡುತ್ತಿದ್ದರು. ಅರ್ಧ ಗಂಟೆ ಹೆಚ್ಚು ಸಮಯವೂ ದೊರೆಯುತ್ತಿತ್ತು. ಪ್ರಾಂಶುಪಾಲರ ಕೋಣೆಯಲ್ಲಿ ಕುಳಿತು ಪರೀಕ್ಷೆ ಬರೆಯಬೇಕಿತ್ತು. ಆ ಸಮಯದಲ್ಲಿ ರಾಜಮೋಹನ ತಿವಾರೀ ಆ ಶಾಲೆಯ ಪ್ರಾಂಶುಪಾಲರಾಗಿದ್ದರು. ಅವರು 'ರಾಮಕೃಷ್ಣ ಮಿಷನ್'ನ ಸಂಪರ್ಕದಲ್ಲಿದ್ದವರು. ಆರೂವರೆ ಅಡಿ ಎತ್ತರದ ತಿವಾರೀ ಅವರ ಬಗ್ಗೆ ಎಲ್ಲರಿಗೂ ಭಯ ಮತ್ತು ಗೌರವ. ಆದರೆ ತಿವಾರೀ ಅವರಿಗೆ ಭಾವೇಶ್‌ನ ಬಗ್ಗೆ ಅತ್ಯಂತ ಪ್ರೀತಿ ಇತ್ತು.

ಒಮ್ಮೆ ಅವರು ಮಕ್ಕಳಲ್ಲಿ ವಿವೇಕಾನಂದರ ವಿಚಾರಗಳು ತಿಳಿಯಲಿ ಎಂದು 'ವಿವೇಕ ವಾಚನ' ಎಂಬ ಸ್ಪರ್ಧೆಯನ್ನು ಏರ್ಪಡಿಸಿದರು. ಮಕ್ಕಳಿಗೆ ರಾಮಕೃಷ್ಣ ಆಶ್ರಮದಿಂದ ತಂದ ಒಂದು ಪುಸ್ತಕದ ಕಂತೆಯನ್ನು ಕೊಟ್ಟರು. ಅವುಗಳನ್ನು ಸಾವಕಾಶವಾಗಿ ಓದಿ ಮನನ ಮಾಡಿಕೊಳ್ಳಲು ಮೂರ್ನಾಲ್ಕು ತಿಂಗಳ ಸಮಯವನ್ನು ಕೊಟ್ಟರು. ಅದರ ನಂತರ ಆ ಪುಸ್ತಕಗಳ ಆಧಾರದ ಮೇಲೆ ಒಂದು ಪರೀಕ್ಷೆ ಏರ್ಪಡಿಸಿದರು. ಭಾವೇಶ್ ಹತ್ತನೇ ತರಗತಿಯಲ್ಲಿ ಇದ್ದಾಗ 'ವಿವೇಕ ವಾಚನ' ಪರೀಕ್ಷೆಯಲ್ಲಿ 100ಕ್ಕೆ 91 ಅಂಕಗಳು ಪಡೆದು, ಶಾಲೆಗೆ ಮೊದಲಿಗರಾದರು. ರಾಮಕೃಷ್ಣ ಮಿಷನ್ ಬಹುಮಾನ ನೀಡಲು ಒಂದು ಸಮಾರಂಭವನ್ನು ಆಯೋಜಿಸಿತು. ಅದರ ಹಿಂದಿನ ದಿನ 'ಲಯನ್ಸ್ ಕ್ಲಬ್' ಸದಸ್ಯರು ಶಾಲೆಗೆ ಬಂದಿದ್ದರು. ಅವರು ಪ್ರತಿ ತರಗತಿಗೆ ಹೋಗಿ, ಅದೇ ಶಾಲೆಯ ಓರ್ವ ಹುಡುಗನ ಕ್ಯಾನ್ಸರ್ ಚಿಕಿತ್ಸೆಗೆ ಸಹಾಯವನ್ನು ಕೇಳಿದ್ದರು. ಭಾವೇಶ್‌ನ ಕಿಸೆಯಲ್ಲೇನೂ ಕಾಸಿರಲಿಲ್ಲ. ಆ ಹುಡುಗನ ಕ್ಯಾನ್ಸರ್ ಚಿಕಿತ್ಸೆಗೆ ಏನನ್ನೂ ಕೊಡಲು ಆಗಿರಲಿಲ್ಲ. ಮನಸ್ಸಿಗೆ ಬೇಸರವಾಗಿ ಇಡೀ ರಾತ್ರಿ ಭಾವೇಶ್‌ಗೆ ಸರಿಯಾಗಿ ನಿದ್ರೆ ಬಂದಿರಲಿಲ್ಲ.

ಮರುದಿನ ಸಮಾರಂಭ ಆರಂಭವಾಯಿತು. ಬಹುಮಾನ ವಿತರಣಾ ಕಾರ್ಯಕ್ರಮಕ್ಕೆ ಮೊದಲು, ತಿವಾರೀ ಅವರು ಆ ಕ್ಯಾನ್ಸರ್ ಪೀಡಿತ ಹುಡುಗನ ಮಾತಾಪಿತೃಗಳನ್ನು ವೇದಿಕೆಯ ಮೇಲೆ ಕರೆದರು. ಅವರ ಆರ್ಥಿಕ ಸ್ಥಿತಿಯ ಬಗ್ಗೆ ನೆರೆದವರಿಗೆ ತಿಳಿಸಿದರು. 'ಲಯನ್ಸ್ ಕ್ಲಬ್' ಮತ್ತು ರಾಮಕೃಷ್ಣ ಮಿಷನ್' ಸಂಗ್ರಹಿಸಿದ ಹಣವನ್ನು ಅವರ ಕೈಗೆ ಕೊಟ್ಟರು.

ಅದಾದ ಮೇಲೆ ಬಹುಮಾನ ವಿತರಣೆ ಆರಂಭವಾಯಿತು. ಪ್ರಥಮ ಬಹುಮಾನ ಬಂದ ಭಾವೇಶನನ್ನು ವೇದಿಕೆಯ ಮೇಲೆ ಕರೆದರು. ಭಾವೇಶ್‌ಗೆ ಚಂದದ ಟ್ರೋಫಿಯ ಜೊತೆಯಲ್ಲಿ 101 ರೂಪಾಯಿ ನಗದನ್ನು ಕೈಗಿಟ್ಟು, ಎರಡು ಮಾತನಾಡಲು ಆತನ ಕೈಗೆ ಮೈಕ್ ಕೊಟ್ಟರು. ಟ್ರೋಫಿಗಿಂತಲೂ ಕೈಗೆ ಇಟ್ಟ 101 ರೂಪಾಯಿ ಭಾವೇಶ್‌ಗೆ ಸಂಭ್ರಮದ ಅವಕಾಶವನ್ನು ಕಲ್ಪಿಸಿತ್ತು. ಬಹುಮಾನದ ಅಷ್ಟೂ ಹಣವನ್ನು ಆ ಹುಡುಗನ ಕ್ಯಾನ್ಸರ್ ಚಿಕಿತ್ಸೆಗೆ ನೀಡಿಬಿಟ್ಟರು. ಎರಡು ಕ್ಷಣ ಇಡೀ ಸಭೆಯಲ್ಲಿ ನಿಶಬ್ದ. ಭಾವೇಶ್‌ಗೆ ತಾನು ಏನಾದರೂ ತಪ್ಪು ನುಡಿದೆನೆ ಎಂಬ ಭೀತಿ. ಮರುಕ್ಷಣ ಇಡೀ ಸಭೆ ಎದ್ದು ನಿಂತು ಬಾಲಕನ ಉದಾರತೆಗೆ ಚಪ್ಪಾಳೆ ತಟ್ಟಿತು. ಭಾವೇಶನ ಮನಸ್ಸು ಹಗುರಾಗಿತ್ತು. ಅಗತ್ಯವಿರುವವರಿಗೆ ತಮ್ಮ ಕೈಯಲ್ಲಿ ಆದಷ್ಟು ಸಹಾಯ ಮಾಡುವುದು ಎಂತಹ ಸಂತಸದ ಅನುಭವ ಎಂದು ಅರಿವಾಗಿತ್ತು. ತನ್ನ ಕೆಲಸ ಯಾರಿಗಾದರೂ ಸಹಾಯವಾಗಬೇಕು — ಇದೇ ಅವರ ಬದುಕಿನ ಪ್ರೇರಣಾ ಶಕ್ತಿಯಾಗಲಿತ್ತು. ಈ ಘಟನೆ ಸದಾ ಅವರ ಹೃದಯದಲ್ಲಿ ಸ್ಫೂರ್ತಿಯ ಸೆಲೆಯಾಗಿ ಉಳಿಯಲಿತ್ತು.

ಅಧ್ಯಾಯ–3

ಗೋಂದಿಯಾದಿಂದ ನೇಪಾಳಕ್ಕೆ ಸೈಕಲ್ ಪ್ರವಾಸ

ಹೈಸ್ಕೂಲಿನ ದಿನಗಳಲ್ಲಿ ಭಾವೇಶ್ ಅವರಿಗೆ ದಿನೇಶ್ ಕಾರಿಯಾ ಎಂಬ ಓರ್ವ ಮಿತ್ರನಿದ್ದ. ಭಾವೇಶ್ ಮತ್ತು ದಿನೇಶ್ ಶಾಲೆಯಿಂದ ಹಿಡಿದು ಕಾಲೇಜಿನವರೆಗೆ ಒಟ್ಟಿಗೆ ಓದಲಿದ್ದರು. ಶಾಲೆಯಲ್ಲಿ ದಿನೇಶ್ ತೀರಾ ಸಾಧಾರಣ ವಿದ್ಯಾರ್ಥಿಯಾಗಿದ್ದ. ಶಾಲೆಯಲ್ಲಿ ಆತನ ಉಪಸ್ಥಿತಿಗಿಂತ ಅನುಪಸ್ಥಿತಿಯೇ ಹೆಚ್ಚಿತ್ತು. ಬೆಳಗ್ಗೆ ಶಾಲೆಯಲ್ಲಿದ್ದರೆ, ಮಧ್ಯಾಹ್ನ ನಾಪತ್ತೆ. ಓದಿನತ್ತ ಆತನ ಗಮನ ಕಿಂಚಿತ್ತೂ ಇರಲಿಲ್ಲ. ಅಲೆದಾಡುವುದರಲ್ಲಿ ಎಲ್ಲಿಲ್ಲದ ಹುರುಪು ಮತ್ತು ಒಲವು. ಆದರೆ ಏಳನೇ ತರಗತಿ ದಾಟುತ್ತಿದ್ದಂತೆ ದಿನೇಶ್ ಓದಿನ ಬಗ್ಗೆ ಬಹಳಷ್ಟು ಗಮನ ಕೊಡಲು ಆರಂಭಿಸಿದ್ದ. ಹತ್ತನೆಯ ತರಗತಿಯ ಹೊತ್ತಿಗೆ ಆತ ಶಾಲೆಯ ಬುದ್ಧಿವಂತ ಹುಡುಗರಲ್ಲಿ ಒಬ್ಬನಾಗಿದ್ದ. ಇದೇ ಹುಡುಗ ಮುಂದೆ ಹನ್ನೆರಡನೇ ತರಗತಿಯಲ್ಲಿ ಇಡೀ ಮಹಾರಾಷ್ಟ್ರದ ಬೋರ್ಡ್ ಪರೀಕ್ಷೆಯಲ್ಲಿ ಐದನೇ ಸ್ಥಾನ ಪಡೆಯಲಿದ್ದ. ಆತ ಎನ್.ಸಿ.ಸಿ. ಯಲ್ಲಿಯೂ ಉತ್ತಮ ಪ್ರದರ್ಶನ ನೀಡಿದ್ದ. ತನ್ನನ್ನು ತಾನು ಉತ್ತಮಗೊಳಿಸುತ್ತಾ, ಸಾಬೀತು ಮಾಡುತ್ತಾ, ದೈಹಿಕ ಮತ್ತು ಬೌದ್ಧಿಕವಾಗಿ ಶಕ್ತನಾಗಿಸಿಕೊಳ್ಳುತ್ತಾ ನಡೆದ ದಿನೇಶನ ಸ್ನೇಹ ಭಾವೇಶ್ ಅವರಿಗೆ ಸ್ಫೂರ್ತಿ ನೀಡಿತ್ತು. ಇಷ್ಟಲ್ಲದೆ ಇಡೀ ದಿನ ಶಾಲೆಯಲ್ಲಿ ಕಲಿಸಿದ್ದನ್ನು ನೋಟ್ಸ್ ಮಾಡಿಕೊಂಡು ದಿನೇಶ್ ಸಂಜೆ ಅದನ್ನು ಭಾವೇಶ್‌ಗೆ ಕೊಡುತ್ತಿದ್ದ. ಮನೆಯಲ್ಲಿ ಅಮ್ಮ ಆ ನೋಟ್ಸ್‌ನಿಂದ ಭಾವೇಶ್‌ಗೆ ಪಾಠ ಓದಿ ಹೇಳಲು ಸಾಧ್ಯವಾಗುತ್ತಿತ್ತು. ದಿನೇಶನಿಗೆ ದಿನಪತ್ರಿಕೆ ಓದುವುದರಲ್ಲಿ ಅತ್ಯಂತ ಆಸಕ್ತಿ. ಭಾವೇಶ್‌ಗೂ ದೇಶ ವಿದೇಶಗಳ ವಾರ್ತೆ ತಿಳಿಯುವ ಕುತೂಹಲ. ಶಾಲೆಯ ಬಳಿಕ ಇಬ್ಬರೂ ಆಟದ ಮೈದಾನಕ್ಕೆ ಓಡುವರು. ಅಲ್ಲಿ ದಿನೇಶ ದಿನಪತ್ರಿಕೆಯ ಸುದ್ದಿಗಳನ್ನು ವಿವರವಾಗಿ ಭಾವೇಶನಿಗೆ ಓದಿ ಹೇಳುವ. ದಿನಪತ್ರಿಕೆ ಓದುವ ಹವ್ಯಾಸ ಭಾವೇಶ್‌ಗೆ ಹತ್ತಿದ್ದು ಹೀಗೆ. ದಿನಪತ್ರಿಕೆ ಅವರ ಜ್ಞಾನದ